

ಮಹಿಳೆಯರ ಕೊರಳನ್ನು ಅಲಂಕರಿಸಿವೆ. ಕರ್ನಾಟಕದ ಮಹಿಳೆಯರ ಕೈಯಲ್ಲಿ ಅರಳಿದ ಮಣ್ಣಿನಾಭರಣ ವಿಭಿನ್ನ ವೈಭವದ ರೂಪದೊಂದಿಗೆ ಮಹಿಳೆಯರ ಮನಸ್ಸನ್ನು ಗೆದ್ದಿವೆ. ಈ ಒಡವೆ ಕಲೆ ಅನೇಕ ಮಹಿಳೆಯರಿಗೆ ಸಂಪಾದನೆ ಮಾಡುವ ದಾರಿಯಾಗಿದೆ. ಅವರ ಬದುಕಿನ ಹೊಂಗನಸುಗಳಿಗೆ ಸ್ಫೂರ್ತಿ ನೀಡಿದೆ ಎಂದರೆ ತಪ್ಪಿಲ್ಲ.

ಅಪ್ಪಟ ಪರಿಸರಸ್ನೇಹಿಯಾದ ಇದು ಮಣ್ಣಿನಿಂದಲೇ ಮಾಡಲ್ಪಡುತ್ತದೆ. ಜೇಡಿ ಮಣ್ಣನ್ನು ಹದವಾಗಿ ಕುಟ್ಟಿ ಅದನ್ನು ಮೆದು ಮಾಡಿದಾಗ ಅದುವೇ ಟೆರಾಕೋಟ ಎನ್ನುವ ಹೆಸರಿನಿಂದ ಕರೆಸಿಕೊಳ್ಳುತ್ತದೆ. ಕಲಾಕಾರರ ಕೈಯಲ್ಲಿ ಆ ಮಣ್ಣು ವಿವಿಧ ವಿನ್ಯಾಸದ ಆಭರಣ, ಅಲಂಕಾರಿಕ ವಸ್ತುವಾಗಿ ಮಾರ್ಪಾಡಾಗುತ್ತದೆ.

ಈ ಟೆರಾಕೋಟದಿಂದ ವಿವಿಧ ಬಗೆಯ ಪದಕ, ಕಿವಿಯೋಲೆ, ಹಾರವನ್ನು ನಿರ್ಮಿಸಿ, ಅದರ ಮೇಲೆ ಕಲಾಕಾರರು ತಮ್ಮ ಕೈಚಳದಿಂದ ಸೂಕ್ಷ್ಮವಾದ, ಅದ್ಭುತ ಕಲೆಯನ್ನು ಚಿತ್ರಿಸುತ್ತಾರೆ. ಆ ನಂತರ ಈ ಮಣ್ಣಿನ ಮಡಿಕೆಯಲ್ಲಿ ಹದವಾಗಿ ಸುಟ್ಟರೆ ಅವು ಗಟ್ಟಿಯಾದ ಸ್ಥಿತಿ ಪಡೆದುಕೊಳ್ಳುತ್ತವೆ. ಇವುಗಳ ಮೇಲೆ ವಾರ್ನಿಸ್ ಬಳಿದರೆ, ಹೊಳೆಯುವ ಆಭರಣಕ್ಕೆ ಒಂದು ರೂಪ, ಬಣ್ಣ ಬರುತ್ತದೆ. ಆನಂತರ ಅದರ ಮೇಲೆ ತಾವೇ ರಚಿಸಿದ ಕುಸುರಿಗಳಿಗೆ ತಮ್ಮದೇ ಕಲ್ಪನೆಯ ಬಣ್ಣ ತುಂಬುವ ಸೂಕ್ಷ್ಮವಾದ ಕೆಲಸದಿಂದ ಅದನ್ನು ಸಹಜವಾದ ಬಂಗಾರ, ಬೆಳ್ಳಿಯ ಆಭರಣಗಳಂತೆ ರೂಪ ನೀಡುತ್ತಾರೆ.

### ಮಣ್ಣಿನಿಂದ ರುದ್ರಾಕ್ಷಿ ಹಾರ

ರುದ್ರಾಕ್ಷಿ, ಕಟ್ಟಿಗೆ, ಮುತ್ತು, ಹವಳದಂತಹ ಆಧುನಿಕ ಆಕಾರವನ್ನು ನೀಡಿ, ಆ ಪದಕ, ಮುತ್ತುಗಳ ಮೇಲೆ ವರ್ಲಿ, ಹಸೆಮಣೆ ಚಿತ್ತಾರದಂತಹ ಚಿತ್ರ ಬಿಡಿಸಿ ಆಧುನಿಕ ರೂಪ ಕೊಡಬಹುದು, ಕೆಲವು ಆಭರಣಗಳಿಗೆ ಸಾಂಪ್ರದಾಯಿಕ ರೂಪ ನೀಡಿದರೆ, ಇನ್ನೂ ಕೆಲವು ಪದಕಗಳಲ್ಲಿ ದೇವರ ಹಾಗೂ ದೇವತೆಯ ಮುಖಗಳನ್ನು ರಚಿಸಿ, ಹೊಸ ರೂಪ, ಸೌಂದರ್ಯವನ್ನೇ ನೀಡುವುದೂ ಇದೆ. ಚಿನ್ನದ ಹೊಳಪಿನೊಂದಿಗೆ ಅವುಗಳಿಗೆ ಹರಳು, ಮುತ್ತುಗಳ ಜೋಡಣೆಯೊಂದಿಗೆ ವೈಭವದ ರೂಪ ಕೊಟ್ಟರೆ ಮದುವೆ ಸಮಾರಂಭದಲ್ಲಿ ಈ ಒಡವೆಯದ್ದೇ ಸದ್ದು. ತಮ್ಮ ಕೈಚಳಕದಿಂದ ಅದ್ಭುತ ಕುಸುರಿ ಕಲೆಯಿಂದ ಮಣ್ಣಿಗೆ ಹೊನ್ನಿನ ಮೆರುಗು ನೀಡಿ, ಕಲೆಯ ಇನ್ನೊಂದು ಝಲಕ್ ತೋರಿಸುವ ಈ ಆಭರಣಗಳು ಅಷ್ಟೇನೂ ಭಾರವಲ್ಲದ, ಕೈಗೆಟಕುವ ಬೆಲೆಯಲ್ಲಿ ಲಭ್ಯ. ಕಾಲೇಜು ವಿದ್ಯಾರ್ಥಿಗಳು, ಕೆಲಸಕ್ಕೆ ಹೋಗುವವರು ಆಧುನಿಕ ಡ್ರೆಸ್‌ನಿಂದ, ಸೀರೆಯವರೆಗೂ ಪರ್ಫೆಕ್ಟ್ ಮ್ಯಾಚ್ ಮಾಡಿಕೊಳ್ಳಬಹುದು.

ಇತ್ತೀಚೆಗೆ ಮದುಮಕ್ಕಳ ಸಿಂಗಾರದಲ್ಲೂ ಟೆರಾಕೋಟ ಪಾಲು ಪಡೆದಿದೆ. ಎಲ್ಲರನ್ನೂ ಆಕರ್ಷಿಸುವ ಇವು ಈಗ ಜುವೆಲ್ಲರಿ ಶಾಪ್, ಆನ್‌ಲೈನ್‌ನಲ್ಲಿ ಕೂಡ ಸಿಗುತ್ತವೆ. ಕಿವಿಯೋಲೆ 200ರಿಂದ, ಸರಕ್ಕೆ 200ರಿಂದ ಹಾಗೂ ಹಾರಕ್ಕೆ 5 ಸಾವಿರ ರೂಪಾಯಿಗಳಿಗೆ ಲಭ್ಯ.

ಅಷ್ಟೇನೂ ಕಾಳಜಿಯ ಅವಶ್ಯಕತೆಯೂ ಇಲ್ಲದ ಈ ಕಲಾಕೃತಿಗಳು ಧರಿಸುವುದಕ್ಕಷ್ಟೇ ಅಲ್ಲ, ಕಾಣಿಕೆಯಾಗಿ ನೀಡಲು ಕೂಡ ಯೋಗ್ಯವಾಗಿವೆ. ಇಂತಹ ಉತ್ಪನ್ನಗಳ ಉದ್ಯಮ, ಹೆಚ್ಚಾಗಿ ಮಹಿಳೆಯರಿಂದಲೇ ನಡೆಯುತ್ತಿದೆ ಎನ್ನುವುದು ವಿಶೇಷ. ಇದರ ಬಗ್ಗೆ ಮಾಹಿತಿ, ತರಬೇತಿಗಳು ಆನ್‌ಲೈನ್ ಮೂಲಕ ದೊರೆಯುತ್ತವೆ.

‘ಮಣ್ಣಿನಿಂದ ಕಲಾತ್ಮಕತೆಯನ್ನು ಜೀವಂತವಾಗಿರಿಸಿ ಜೀವನ ಸಾಗಿಸುತ್ತಿರುವ ಅನೇಕ ಕುಟುಂಬಗಳಿಗೆ ಈ ಕಲೆ ಅವರ ಬದುಕನ್ನು ಬಣ್ಣಮಯವಾಗಿಸಿದೆ. ದೇಶ ವಿದೇಶಗಳಲ್ಲೂ ಈ ಆಭರಣಕ್ಕೆ ಬೇಡಿಕೆ ಇದೆ’ ಎಂದು ಹೇಳುತ್ತಾರೆ ಮಣ್ಣಿನ ಆಭರಣ ತಯಾರಿಕೆಯ ಉದ್ಯಮಿ ಮೈಸೂರಿನ ನೀಲಿ ಲೋಹಿತ್. ಇವರು ಅನೇಕರಿಗೆ ಕೆಲಸವನ್ನು ನೀಡಿದ್ದಲ್ಲದೆ ತರಬೇತಿ ಕೂಡ ನೀಡಿ ಅವರ ಜೀವನೋಪಾಯಕ್ಕೆ ದಾರಿ ಮಾಡಿ ಕೊಟ್ಟಿದ್ದಾರೆ.

ನೀಲಿ ರೋಹಿತ್ ಅವರ
ಸಂಪರ್ಕ: 7676960671

# ಮಣ್ಣಿನ ಘಮ; ಒಡವೆಯ ಶ್ರಮ

**ಮ**ಳೆ ಬಂದಾಗ ಮೂಗಿಗಡರುವ ಮಣ್ಣಿನ ವಾಸನೆ ಆಸ್ವಾದನೆಗೆ ಹಿತ. ಮಣ್ಣಿನ ವಾಸನೆ ಅಷ್ಟೇ ಅಲ್ಲ, ಇದರಿಂದ ತಯಾರಾಗುವ ಪ್ರತಿ ವಸ್ತುವೂ ಮೈಮನಕ್ಕೆ ಹಿತವೋ ಹಿತ. ಇದರಲ್ಲಿ ದೇಸಿ ಸೊಬಗಿದೆ. ಎಲ್ಲರಿಗೂ ಖುಷಿಕೊಡುವ ಮಣ್ಣು ಸದಾ ಗುಣವಂತೆಯೇ.

ಮಣ್ಣಿನಿಂದ ಮಾಡಿರುವ ಆಭರಣಗಳು ಕಣ್ಣಿಗೆ ತಂಪು, ಮನಸ್ಸಿಗೆ ಆನಂದ, ಮೈಗೂ ಒಪ್ಪಿತ. ಮಣ್ಣಿನಿಂದ ತಯಾರಾಗುವ ‘ಟೆರಾಕೋಟ ಆಭರಣ’ ಎಲ್ಲ ವಯಸ್ಸಿನ ಮಹಿಳೆಯರಿಗೂ, ಎಲ್ಲ ವಿಧದ ಉಡುಪಿಗೂ ಸರಿಹೊಂದುವಂಥದ್ದು.

ಚಿನ್ನ, ಬೆಳ್ಳಿ, ಪ್ಲಾಟಿನಂ, ವಜ್ರಗಳಲ್ಲಿ ವೈವಿಧ್ಯಮಯ ಒಡವೆಗಳು ಲಭ್ಯ. ಈ ಲೋಹವನ್ನೂ ಮೀರಿಸಿ ಮಣ್ಣಿನಲ್ಲಿ ಇನ್ನೂ ಹಲವಾರು ವೈವಿಧ್ಯದ ಒಡವೆಗಳನ್ನು ತಯಾರಿಸಬಹುದು. ಬೆಲೆಯೂ ದುಬಾರಿಯಲ್ಲ. ಫ್ಯಾಷನ್‌ಗೆ, ಅಂದಕ್ಕೆ, ಮ್ಯಾಚಿಂಗ್‌ಗೆ ಎಲ್ಲದಕ್ಕೂ ಸೈ ಎನಿಸಿವೆ ಮಣ್ಣಿನ ಆಭರಣಗಳು.

ಸೃಜನಶೀಲ ಹಾಗೂ ಫ್ಯಾಷನಬಲ್ ಆಗಿ ಕಾಣಿಸಿಕೊಳ್ಳಬೇಕು ಎಂಬ ಮನಸ್ಥಿತಿಯವರು ಟೆರಾಕೋಟ ಆಭರಣ ಖರೀದಿಸುತ್ತಾರೆ. ಜೀನ್ಸ್, ಕುರ್ತಿ, ಕಾಟನ್ ಸೀರೆ ಮುಂತಾದ ಉಡುಗೆಗಳಿಗೆ ಚೆನ್ನಾಗಿ ಕಾಣುತ್ತದೆ ಈ ಮಣ್ಣಿನ ಒಡವೆ.

### ಆಭರಣ ಮಾಡೋದು ಹೇಗೆ?

ಜೇಡಿಮಣ್ಣನ್ನು 12 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿಡಬೇಕು. ಆಮೇಲೆ ಇದನ್ನು ಜರಡಿಯಾಡಿ ಶುದ್ಧಗೊಳಿಸಿ 15 ದಿನಗಳ ಕಾಲ ನೆರಳಿನಲ್ಲೇ ಒಣಗಿಸಬೇಕು.

ಮಣ್ಣು ಒಣಗಿಸಿ ಹದ ಮಾಡಿದ ನಂತರ ಆಭರಣ ಮಾಡಬಹುದು. ಮಣ್ಣಿನಿಂದ ತಯಾರಿಸುವ ಆಭರಣ ಮತ್ತಿತರ ವಸ್ತುಗಳು ನೀರಿನಲ್ಲಿ ನೆನೆದರೆ ಕರಗಿ ಹಾಳಾಗುತ್ತವೆ. ಇದಕ್ಕಾಗಿ ಆಭರಣ ತಯಾರಾದ ಬಳಿಕ ಮಡಿಕೆಯಲ್ಲಿ ಹಾಕಿ ಕಾಯಿಸಿದರೆ ಬಣ್ಣವೂ ಕೆಡುವುದಿಲ್ಲ, ಆಭರಣವೂ ಕರಗುವುದಿಲ್ಲ. ವರ್ಷಗಳವರೆಗೆ ಬಾಳಿಕೆ ಬರುತ್ತದೆ.

ಅಕ್ರಲಿಕ್ ಬಣ್ಣಗಳನ್ನು ಬಳಸಿ ತಯಾರಿಸುವ ಮಣ್ಣಿನ ಬಣ್ಣದೊಡವೆಯನ್ನು ಎಲ್ಲಿ ಬೇಕಾದರೂ ಒಯ್ಯಬಹುದು. ಜುಮುಕಿ, ಸರ, ನೆಕ್ಲೇಸ್, ಪೆಂಡೆಂಟ್, ಬ್ರೇಸ್ಲೆಟ್ ಲಭ್ಯವಿದೆ.

■ ಯು.ಎ.